# ಸಾಲನಿಧಿ ಮಾರುಕಟ್ಟೆಯ ಅಗತ್ಯ

**ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ಯೋಜನೆಗಳಿಗಾಗಿ ಹಣ ಸಂಗ್ರಹಿಸಲು, ವಿಮೆ ಮತ್ತು ಮ್ಯೂಚುವಲ್ ಫಂಡ್ ಕ್ಷೇತ್ರದ ಬೆಳವಣಿಗೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಸಾಲ ನಿಧಿ ಮಾರುಕಟ್ಟೆಯ ಅಗತ್ಯ ಇರುವುದನ್ನು ಇಲ್ಲಿ ವಿಶ್ಲೇಷಿಸಲಾಗಿದೆ.**



ರಾಜೀವ್ ಠಕ್ಕರ್

**ಜಾಗತಿಕ** ಮಟ್ಟದಲ್ಲಿ ಕಡಿಮೆ ಬಡ್ಡಿ ದರದ ವಾತಾವರಣ ಇರುವುದು ಸಾಲ ನಿರ್ವಾಹಕರು ಹಾಗೂ ಹೂಡಿಕೆದಾರರ ಮುಂದಿನ ಪ್ರಮುಖ ಸವಾಲಾಗಿದೆ. ಈ ಲೇಖನ ಬರೆಯುತ್ತಿರುವ ವೇಳೆಗೆ ಜಗತ್ತಿನಾದ್ಯಂತ ಸುಮಾರು ₹ 975 ಲಕ್ಷ ಕೋಟಿ ಮೌಲ್ಯದ ನಿಧಿಗಳು ಋಣಾತ್ಮಕ ಗಳಿಕೆ ದಾಖಲಿಸುತ್ತಿವೆ. ಭಾರತದಲ್ಲಿ ಸದ್ಯಕ್ಕೆ ಈ ಸಮಸ್ಯೆ ಇಲ್ಲ. ಹಿಂದಿನ ಸ್ಥಿತಿಗೆ ಹೋಲಿಸಿದರೆ, ಇಲ್ಲಿ ಬಡ್ಡಿ ದರಗಳು ಸ್ವಲ್ಪ ಕಡಿಮೆಯಿದ್ದರೂ ನಿಧಿಗಳು ಧನಾತ್ಮಕ ಗಳಿಕೆಯಲ್ಲಿವೆ. ಸಣ್ಣ ಉಳಿತಾಯಗಳಿಗೆ ಹೆಚ್ಚಿನ ಬಡ್ಡಿ ನೀಡಲಾಗುತ್ತಿದೆ ಮತ್ತು ಆರ್‌ಬಿಐ ನೇರವಾಗಿ ಬಾಂಡ್‌ಗಳನ್ನು ವಿತರಿಸುತ್ತಿದೆ.

ಕೇಂದ್ರ ಸರ್ಕಾರದ 10 ವರ್ಷ ಅವಧಿಯ ಬಾಂಡ್‌ಗಳು ಹೂಡಿಕೆದಾರರಿಗೆ ವಾರ್ಷಿಕ ಶೇ 6.44ರಷ್ಟು ಗಳಿಕೆಯನ್ನು ನೀಡುತ್ತಿವೆ. ಎಎಎ ಶ್ರೇಣಿಯ ಮತ್ತು 10 ವರ್ಷ ಪಕ್ವತೆಯ ಅವಧಿ ಹೊಂದಿರುವ ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ ) ಬಾಂಡ್‌ಗಳು ಶೇ 7.26 ಹಾಗೂ ಇಂಡಿಯನ್ ರೈಲ್ವೆ ಫೈನಾನ್ಸ್ ಕಾರ್ಪೊರೇಷನ್ (ಐಆರ್‌ಎಫ್‌ಸಿ) ಬಾಂಡ್‌ಗಳು ಶೇ 7.32ರ ದರದಲ್ಲಿ ವಹಿವಾಟು ನಡೆಸುತ್ತಿವೆ. ಜತೆಗೆ ಆರ್‌ಬಿಐ ವಾರ್ಷಿಕ ಶೇ 7.75ರ ದರದಲ್ಲಿ ಏಳು ವರ್ಷಗಳ ಅವಧಿಗೆ ಬಾಂಡ್‌ಗಳನ್ನು ನೇರವಾಗಿ ಸಾರ್ವಜನಿಕರಿಗೆ ವಿತರಿಸುತ್ತಿದೆ.

ಸರ್ಕಾರ ಹಾಗೂ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಈ ನಿಧಿಗಳ ವಹಿವಾಟಿನ ಗಳಿಕೆಯು ನಿಧಿಯ ನಿರ್ವಹಣಾ ವೆಚ್ಚವನ್ನು ಒಳಗೊಂಡಿರುತ್ತದೆ. ಈ ವೆಚ್ಚವು ವಾರ್ಷಿಕ ಸುಮಾರು ಶೇ 0.5ರಿಂದ ಶೇ 1.5ರಷ್ಟು ಇರಬಹುದು. ಇದು 10 ವರ್ಷ ಅವಧಿಯ ಸರ್ಕಾರಿ ಬಾಂಡ್‌ನ ಗಳಿಕೆಯನ್ನು ವಾರ್ಷಿಕ ಶೇ 5.94 ರಿಂದ ಶೇ 6.8ರಷ್ಟಕ್ಕೆ ತಗ್ಗಿಸಲಿದೆ. ಇತರ ಹೂಡಿಕೆಗಿಂತ ವಾರ್ಷಿಕ ಶೇ 1.8ರಷ್ಟು ಹೆಚ್ಚಿನ ಗಳಿಕೆ ನೀಡುವ ಮತ್ತು ಅಪಾಯರಹಿತವಾದ ಬಾಂಡ್‌ಗಳು ಲಭ್ಯ ಇರುವಾಗ, ಹೂಡಿಕೆದಾರರು ಮಾರುಕಟ್ಟೆಯ ಅಪಾಯವನ್ನಾಗಲಿ, ಬಡ್ಡಿದರ ಏರಿಳಿತದ ಅಪಾಯವನ್ನಾಗಲಿ ಎದುರಿಸುವ ಅಗತ್ಯ ಇಲ್ಲ. ಉಳಿತಾಯ ಖಾತೆಯ ಹಣಕ್ಕೆ ಶೇ 6ರಿಂದ ಶೇ 7ರಷ್ಟು ಬಡ್ಡಿ ನೀಡುವ ಕೆಲವು ಬ್ಯಾಂಕ್‌ಗಳು ನಮ್ಮಲ್ಲಿವೆ. ಇಂತಹ ಖಾತೆಯಲ್ಲಿಟ್ಟ ₹5ಲಕ್ಷ ವರೆಗಿನ ಮೊತ್ತಕ್ಕೆ ಭದ್ರತೆ ಇರುತ್ತದೆ. ಜತೆಗೆ ಹೂಡಿಕೆದಾರರಿಗೆ ಬೇಕಾದಾಗ ನಗದೀಕರಿಸುವ ಅವಕಾಶವೂ ಇಲ್ಲಿ ಇರುತ್ತದೆ.

ಸಣ್ಣ ಉಳಿತಾಯ ಮತ್ತು ಆರ್‌ಬಿಐ ಬಾಂಡ್‌ಗಳ ಮೇಲಿನ ಹೆಚ್ಚಿನ ಆದಾಯವು ಮುಚ್ಚಿಡುವಂತಹ ವಿಷಯ ಏನಲ್ಲ. ನಗದುತನ ಮತ್ತು ತೆರಿಗೆಯ ಲಾಭವು, ಸಾಲ ನಿಧಿಗಳ ಆಕರ್ಷಣೆಯ ಪ್ರಮುಖ ಅಂಶಗಳಾಗಿವೆ. ಹೂಡಿಕೆದಾರರು ಕೆಲವೊಮ್ಮೆ ತಮಗೆ ಬೇಕಾದಾಗಲ್ಲೆಲ್ಲ ಹಣ ಮರಳಿ ಪಡೆಯುವ ಸೌಲಭ್ಯ (ನಗದುತನ / ದ್ರವ್ಯತೆ) ಇಷ್ಟಪಡುತ್ತಾರೆ. ಹೂಡಿಕೆದಾರರು ಮೂಲ ಧನ ಪಡೆಯದೆ, ನಿಯಮಿತ ಆದಾಯವನ್ನು ಮಾತ್ರ ಬಯಸುವವರಾಗಿದ್ದರೆ, ಆರ್‌ಬಿಐನ ಬಾಂಡ್‌ಗಳು ಸೂಕ್ತವೆನಿಸಬಹುದು. ಬ್ಯಾಂಕ್ ಠೇವಣಿಗಳೂ ಸಹ ಕೆಲವೊಬ್ಬರ ಆಯ್ಕೆಯಾಗಬಹುದು. ತೆರಿಗೆ ಉಳಿಸುವ ವಿಚಾರದಲ್ಲಿ ಸಾಲ ನಿಧಿಗಳು ಮ್ಯೂಚುವಲ್ ಫಂಡ್‌ಗಿಂತ ಒಳ್ಳೆಯ ಆಯ್ಕೆಗಳಾಗಿವೆ. ಇದಲ್ಲದೆ ಮಧ್ಯಮಾವಧಿಗೆ ಮತ್ತು ಆದಾಯ ಹೆಚ್ಚಿಸಲು ಅನುಕೂಲವಾಗುವಂತಹ ತೆರಿಗೆ ಮುಕ್ತ ಬಾಂಡ್‌ಗಳೂ ಲಭ್ಯ ಇವೆ.

ನಗದೀಕರಣಕ್ಕೆ ಮುಕ್ತವಾಗಿರುವ ಫಂಡ್‌ಗಳು (open ended ) ಗ್ರಾಹಕರಿಗೆ ಹಣದ ತುರ್ತು ಎದುರಾದರೆ ಕೆಲವೇ ದಿನಗಳಲ್ಲಿ ನಿವ್ವಳ ಸಂಪತ್ತು ಮೌಲ್ಯದ (ಎನ್‌ಎವಿ) ಮೌಲ್ಯದ ಆಧಾರದಲ್ಲಿ ಅಲ್ಪಾವಧಿಯಲ್ಲಿ ನಗದೀಕರಿಸುವ ಭರವಸೆಯನ್ನು ನೀಡುತ್ತವೆ. ಸರ್ಕಾರಿ ಸಂಸ್ಥೆಗಳಿಗೆ ಹೊರತಾದ ಸಂಸ್ಥೆಗಳು ನೀಡುವ ಹೆಚ್ಚಿನ ಬಾಂಡ್‌ಗಳು ಅವಧಿಗೂ ಮುನ್ನ ನಗದೀಕರಣದ ಅವಕಾಶ ನೀಡುವುದಿಲ್ಲ.

- ಸಣ್ಣ ಉಳಿತಾಯ ಮತ್ತು ಆರ್‌ಬಿಐ ಬಾಂಡ್‌ಗಳಿಂದ ಹೆಚ್ಚಿನ ಆದಾಯ
- ನಿಯಮಿತ ಆದಾಯಕ್ಕೆ ಸರ್ಕಾರಿ ಬಾಂಡ್, ಬ್ಯಾಂಕ್ ಠೇವಣಿ ಸೂಕ್ತ
- ಸಾಲ ನಿಧಿ ಮಾರುಕಟ್ಟೆ ಹಿಗ್ಗಿಸಲು ಕ್ರಮ ಅಗತ್ಯ

ಗರಿಷ್ಠ ವರಮಾನದ ಬಾಂಡ್ ಮಾರುಕಟ್ಟೆಯ ಅನುಪಸ್ಥಿತಿಯಲ್ಲಿ ನಾವು ಹೂಡಿಕೆ ಗುಣಮಟ್ಟದ ಬಾಂಡ್‌ಗಳ ಮಾರುಕಟ್ಟೆ ನಿರ್ಮಿಸಲು ಸಾಧ್ಯವಿಲ್ಲ. ಎಷ್ಟೇ ಸಮರ್ಥ ಲೆಕ್ಕ ಪರಿಶೋಧಕರು ಮತ್ತು ಜಾಗೃತ ರೇಟಿಂಗ್ ಏಜೆನ್ಸಿಗಳಿದ್ದರೂ ಹೂಡಿಕೆ ಗುಣಮಟ್ಟದ ಬಾಂಡ್‌ಗಳು ಅಪಮೌಲ್ಯಗೊಂಡ ಮತ್ತು ಹೂಡಿಕೆದಾರರ ಭರವಸೆ ಹುಸಿಗೊಳಿಸಿದ ಉದಾಹರಣೆಗಳು ಸಾಕಷ್ಟಿವೆ.

ಅಪಮೌಲ್ಯಗೊಂಡ ಅಥವಾ ಡಿಫಾಲ್ಟ್ ಬಾಂಡ್‌ಗಳನ್ನು ನಿಗದಿತ ದರದಲ್ಲಿ ಖರೀದಿಸುವವರಿಗಾಗಿ ಗರಿಷ್ಠ ವರಮಾನದ ಬಾಂಡ್ ಮಾರುಕಟ್ಟೆಯ ಇರುವುದು ಅಗತ್ಯ. ಇಂಥ ಬಾಂಡ್ ಮಾರುಕಟ್ಟೆಯ ಅನುಪಸ್ಥಿತಿಯಲ್ಲಿ ನಗದೀಕರಿಸಬಹುದಾದ ಬಾಂಡ್ ಮಾರುಕಟ್ಟೆಯು ಸರ್ಕಾರಿ ಸಂಸ್ಥೆಗಳ ಬಾಂಡ್‌ಗಳಿಗೆ ಮತ್ತು ಕೆಲವೇ ಕೆಲವು ಸರ್ಕಾರೇತರ ಸಂಸ್ಥೆಗಳ ಬಾಂಡ್‌ಗಳಿಗೆ ಸೀಮಿತವಾಗಿ ಉಳಿಯುತ್ತದೆ. ಆದರೆ, ಬಿಗಿಯಾದ ದಿವಾಳಿತನದ ಕಾನೂನು ಇರದ ಹೊರತು ಗರಿಷ್ಠ ವರಮಾನದ ಬಾಂಡ್ ಮಾರುಕಟ್ಟೆಯು ಕಾರ್ಯನಿರ್ವಹಿಸಲಾರದು.

ಹೂಡಿದ ಹಣವನ್ನು ಹಿಂದೆ ಪಡೆಯಲು ಅನುಕೂಲವಾಗುವ, ಬಿಗಿಯಾದ ಕಾನೂನುಗಳು ಇರುವುದಾದರೆ ಹೆಚ್ಚು ಅಪಾಯ ಆಹ್ವಾನಿಸುವವರಿಗೆ ಮತ್ತು ಚೌಕಾಶಿ ಮಾಡುವವರಿಗೆ ಕೊರತೆಯೇನೂ ಇಲ್ಲ. ಡಿಬೆಂಚರ್‌ಗಳಿಗೆ ಸೊತ್ತಿನ ಭದ್ರತೆ ಇದ್ದರೆ ಮತ್ತು ತ್ವರಿತಗತಿಯಲ್ಲಿ ಸರಳವಾಗಿ ಅಂಥ ಸೊತ್ತುಗಳನ್ನು ವಶಪಡಿಸಿಕೊಂಡು ಮಾರಾಟ ಮಾಡುವಂಥ ವ್ಯವಸ್ಥೆ ರೂಪಿಸಿದರೆ ಗರಿಷ್ಠ ವರಮಾನದ ಬಾಂಡ್‌ಗಳಿಗೂ ಒಂದು ಮಾರುಕಟ್ಟೆ ರೂಪುಗೊಳ್ಳಲು ಸಾಧ್ಯ ಇದೆ. ನಮ್ಮಲ್ಲಿ ದಿವಾಳಿತನ ಕಾನೂನು ಇದ್ದರೂ, ದಾವೆಗಳು ನಡೆಯುತ್ತಲೇ ಇರುತ್ತವೆ. ಇದಕ್ಕೆ ಸಂಬಂಧಿಸಿದ ಹಲವು ಸಮಸ್ಯೆಗಳನ್ನು ಪರಿಹರಿಸದ ಹೊರತು ಅಭಿವೃದ್ಧಿಗೆ ಪೂರಕವಾದ ಗರಿಷ್ಠ ವರಮಾನದ ಬಾಂಡ್ ಮಾರುಕಟ್ಟೆ ರೂಪುಗೊಳ್ಳಲಾರದು.

ಷೇರುಪೇಟೆಯಲ್ಲಾದರೆ ಹೂಡಿಕೆದಾರನ ಸಾಮರ್ಥ್ಯವನ್ನು ಪರಿಗಣಿಸದೆ ಎಲ್ಲರಿಗೂ ಸಮಾನ ಅವಕಾಶ ಇರುತ್ತದೆ. ಯಾರು ಬೇಕಿದ್ದರೂ ಡಿಮ್ಯಾಟ್ ಖಾತೆ ತೆರೆದು ವಹಿವಾಟು ಆರಂಭಿಸಬಹುದು. ಆದರೆ, ಬಾಂಡ್ ಮತ್ತು ಹಣದ ಮಾರುಕಟ್ಟೆಯಲ್ಲಿ ವಹಿವಾಟು ನಡೆಸಲು ಕೆಲ ನಿಬಂಧನೆಗಳಿವೆ. ಲಕ್ಷಾಂತರ ಷೇರುಗಳನ್ನು ಖರೀದಿಸಲು ಮುಂದಾಗುವ ಸಂಸ್ಥೆಗೆ ಹೂಡಿಕೆದಾರನೊಬ್ಬ ಒಂದೇ ಒಂದು ಷೇರನ್ನು ಬೇಕಾದರೂ ಮಾರಾಟ ಮಾಡಬಹುದು. ಆದರೆ ನಿಗದಿತ ಆದಾಯ ಮಾರುಕಟ್ಟೆಯು ಇದಕ್ಕೆ ಸಂಪೂರ್ಣ ತದ್ವಿರುದ್ಧವಾಗಿರುತ್ತದೆ.

ಬ್ಯಾಂಕಿಂಗ್ ಕ್ಷೇತ್ರವು ಸಂಕಷ್ಟದಲ್ಲಿರುವ ಇಂದಿನ ಸಂದರ್ಭದಲ್ಲಿ ಮೂಲ ಸೌಲಭ್ಯ ಮತ್ತು ಅಭಿವೃದ್ಧಿ ಯೋಜನೆಗಳಿಗಾಗಿ ಹಣ ಸಂಗ್ರಹಿಸಲು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುವ ಸಾಲ ನಿಧಿ ಮಾರುಕಟ್ಟೆಯ ಅಗತ್ಯ ಇದೆ. ವಿಮೆ ಮತ್ತು ಮ್ಯೂಚುವಲ್ ಫಂಡ್ ಕ್ಷೇತ್ರ ಬೆಳೆಯಬೇಕಾದರೆ ನಮಗೆ ಅದರ ಹೆಚ್ಚು ಅಗತ್ಯವಿದೆ. ಎಲ್ಲಾ ಹೂಡಿಕೆದಾರರಿಗೂ ಸಮಾನ ಗಳಿಕೆಯನ್ನು ತಂದುಕೊಡಬೇಕೇ ವಿನಾ ಕೆಲವೇ ಕೆಲವು ಹೂಡಿಕೆದಾರರಿಗೆ ಅತಿ ಹೆಚ್ಚಿನ ಗಳಿಕೆ ತಂದುಕೊಡುವ ವ್ಯವಸ್ಥೆ ಇರಬಾರದು.

ಹಿರಿಯ ನಾಗರಿಕರಿಗೆ ಸೌಲಭ್ಯವನ್ನು ನೀಡಬೇಕೆಂದರೆ ಅದನ್ನು ಉದ್ದೇಶಿತ ಪಿಂಚಣಿಗಳ ಮೂಲಕ ನೀಡಬೇಕೇ ವಿನಾ ಸಣ್ಣ ಉಳಿತಾಯದ ಮೇಲೆ ಹೆಚ್ಚಿನ ಬಡ್ಡಿ ನೀಡುವ ಮೂಲಕವಲ್ಲ. ಬಡ್ಡಿ ದರ ಕಡಿತಗೊಳಿಸುವ ಆರ್‌ಬಿಐನ ಉದ್ದೇಶವು ಪರಿಣಾಮಕಾರಿಯಾಗಿ ಈಡೇರದಿರಲು, ಸಣ್ಣ ಉಳಿತಾಯಗಳಿಗೆ ನೀಡುವ ಈ ಹೆಚ್ಚಿನ ಬಡ್ಡಿಯೂ ಒಂದು ಕಾರಣವಾಗಿರುವುದನ್ನು ಮರೆಯುವಂತಿಲ್ಲ. ತಪ್ಪಿತಸ್ಥರ ವಿರುದ್ಧ ಶೀಘ್ರವಾಗಿ ಕ್ರಮ ಕೈಗೊಳ್ಳುವ ವ್ಯವಸ್ಥೆ ಜಾರಿಯಾಗಬೇಕು. ಸಾಲ ಮತ್ತು ನಗದು ಮಾರುಕಟ್ಟೆಯನ್ನು ಕೆಲವೇ ಜನರಿಗೆ ಸೀಮಿತವಾಗಿಸುವ ಬದಲು ಅದರ ವ್ಯಾಪ್ತಿಯನ್ನು ಹಿಗ್ಗಿಸಲು ತುರ್ತು ಕ್ರಮ ಕೈಗೊಳ್ಳಬೇಕಾಗಿದೆ.

(ಲೇಖಕ: ಪಿಪಿಎಫ್‌ಎಎಸ್ ಮ್ಯೂಚುವಲ್ ಫಂಡ್‌ನ ಸಿಐಒ)

Note: Viewers/readers should note that the objective of these articles/interviews is to communicate with our unit-holders and share with them our thought process. It should be noted that views expressed here are based on information available in public domain at this moment. Views expressed here can change depending on change in circumstances. Nothing discussed here, constitute a buy/ sell/ hold recommendation.

**Mutual Fund investments are subject to market risks, read all scheme related documents carefully.**